# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ–1020/2017/ಡಿಆರ್‌ಇ–5

ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ 08–11–2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:–** (1) ಶ್ರೀ ಡಿ. ಸೀತಾರಾಮಪ್ಪ ತಂದೆ ಲೇಟ್ ದಾಸಪ್ಪ, ಕಾರ್ಮಿಕ ನಿರೀಕ್ಷಕರು, 1ನೇ ವೃತ್ತ, ಬಳ್ಳಾರಿ, ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಛೇರಿ, 1ನೇ ಉಪ–ವಿಭಾಗ, ಬಳ್ಳಾರಿ ಮತ್ತು (2) ಶ್ರೀ ಜಿ.ಶ್ರವಣ ತಂದೆ ಜಿ. ತಿಮ್ಮಪ್ಪ, ಅಕ್ಷರಸ್ಥ ಸಹಾಯಕರು, ಕಾರ್ಮಿಕ ನಿರೀಕ್ಷಕರ ಕಛೇರಿ, 1ನೇ ಉಪ–ವಿಭಾಗ, ಬಳ್ಳಾರಿ ಇವರುಗಳು ಸರ್ಕಾರಿ ನೌಕರರಾಗಿ ದುರ್ವರ್ತನೆ ಎಸಗಿರುವ ಸಂಬಂಧ ಅವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು.

*****

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಬಳ್ಳಾರಿ ಲೋಕಾಯುಕ್ತ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ (1) ಶ್ರೀ ಡಿ. ಸೀತಾರಾಮಪ್ಪ ತಂದೆ ಲೇಟ್ ದಾಸಪ್ಪ, 55 ವರ್ಷ, ಕಾರ್ಮಿಕ ನಿರೀಕ್ಷಕರು, 1ನೇ ವೃತ್ತ, ಬಳ್ಳಾರಿ, ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಛೇರಿ, 1ನೇ ಉಪ–ವಿಭಾಗ, ಬಳ್ಳಾರಿ (2) ಶ್ರೀ ಜಿ.ಶ್ರವಣ ತಂದೆ ಜಿ. ತಿಮ್ಮಪ್ಪ, 24 ವರ್ಷ, ಅಕ್ಷರಸ್ಥ ಸಹಾಯಕರು, ಕಾರ್ಮಿಕ ನಿರೀಕ್ಷಕರ ಕಛೇರಿ, 1ನೇ ಉಪ–ವಿಭಾಗ, ಬಳ್ಳಾರಿ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು ದೂರುದಾರರಾದ ಶ್ರೀ ಗಣೇಶ ತಂದೆ ಪರಶುರಾಮ, ಉದ್ಯೋಗ: ಖಾಸಗಿ, ಸಾ: ವಾರ್ಡ ನಂ.27, ಕೌವಲ ಬಜಾರ, ಬಳ್ಳಾರಿ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 7 ರನ್ವಯ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2) ಆಪಾದನೆಯ ಸಂಕ್ಷಿಪ್ತ ಸಾರಾಂಶ :**

ಎ) ದೂರುದಾರರಾದ ಶ್ರೀ ಗಣೇಶ ತಂದೆ ಪರಶುರಾಮ, ಉದ್ಯೋಗ: ಖಾಸಗಿ, ಸಾ: ವಾರ್ಡ ನಂ.27, ಕೌಲ್ ಬಜಾರ, ಬಳ್ಳಾರಿ ಇವರು ದಿ: 23–1–2015 ರಂದು ಕಾರ್ಮಿಕ ಇಲಾಖೆಯ ಕಛೇರಿಯಲ್ಲಿ ನಿಮ್ಮನ್ನು ಭೇಟಿಯಾಗಿ ನನ್ನ ತಂದೆ ಪರಶುರಾಮನ ಹೆಸರಿನಲ್ಲಿ ಮ್ಯಾನ್ ಪವರ್ ಲೈಸನ್ಸ್ ಸಲುವಾಗಿ

ಯಾವ ದಾಖಲೆಗಳು ಬೇಕು ಎಂದು ವಿಚಾರಿಸಿಕೊಂಡು ಮರುದಿನ ನಮ್ಮ ತಂದೆಯ ಹೆಸರಿಗೆ ರೇಣುಕಾ ಯಲ್ಲಮ್ಮ ಟೇಲರ್ ಶ್ಯಾಫ್ ಸಂಸ್ಥೆಗೆ 1 ರಿಂದ 9 ರ ವರೆಗೆ ಮ್ಯಾನ್ ಪವರ್ ಲೈಸನ್ಸ್‌ಬೇಕೆಂದು ಅರ್ಜಿಯನ್ನು ಭರ್ತಿ ಮಾಡಿ ಅದಕ್ಕೆ ಬೇಕಾದ ದಾಖಲೆಗಳನ್ನು ಲಗತ್ತಿಸಿ ಸ್ವೀಕೃತಿಯನ್ನು ನೀಡಲು ಕೋರಿದಾಗ ರೂ.3,000/- ಗಳ ಲಂಚದ ಹಣವನ್ನು ಕೇಳಿರುತ್ತೀರಿ. ಇಂಟರ್‌ನೆಟ್ ಮೂಲಕ ನೋಡಿದಾಗ ಕೇವಲ ರೂ.250/- ಗಳು ಸರ್ಕಾರಿ ಶುಲ್ಕ ಇದ್ದುದ್ದು ದೂರುದಾರರಿಗೆ ಗೊತ್ತಾಗಿದೆ. ದೂರುದಾರರು ಭರ್ತಿ ಮಾಡಿದ ಅರ್ಜಿಗೆ ಸ್ವೀಕೃತಿ ಕೊಡುವಂತೆ ಕೇಳಿದಾಗ 1ನೇ ಎದುರುದಾರರು ಮೊದಲು ರೂ.3,000/- ಗಳನ್ನು ಕೊಡು ನಂತರ ಸ್ವೀಕೃತಿಯನ್ನು ಕೊಡುತ್ತೇನೆ ಅಂತ ಹೇಳಿರುವ ವಿಷಯವನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆರ್ಕಾಡ್ ಮಾಡಿಕೊಂಡಿದ್ದಾರೆ.

ಬಿ) ದೂರುದಾರರು ಪುನಃ ಬಳ್ಳಾರಿ ಲೋಕಾಯುಕ್ತ ಕಛೇರಿಗೆ ಬಂದು ವಾಯ್ಸ್ ರೆಕಾರ್ಡ್ ಕೇಳಿಸಿ ಅದರ ಪ್ರಕಾರ ಸದರಿ ಪೊಲೀಸ್ ಠಾಣೆಯಲ್ಲಿ ಮೊ.ಸಂ.2/2015 ರಂತೆ ಪಿ.ಸಿ.ಕಾಯಿದೆ ಕಲಂ 7,13(1)(ಡಿ) ಸಹ ಕಲಂ 13(2) ರಂತೆ ಎದುರುದಾರರ ವಿರುದ್ಧ ಪ್ರ.ವ.ವರದಿ ದಾಖಲಾಗಿರುತ್ತದೆ.

ಸಿ) ದೂರುದಾರರಿಗೆ ಲಂಚ ಹಣ ಕೊಡುವುದು ಇಷ್ಟವಿಲ್ಲದ ಕಾರಣ ಬಳ್ಳಾರಿ ಲೋಕಾಯುಕ್ತ ಪೊಲೀಸ್ ಠಾಣೆ/ಕಛೇರಿಗೆ ಹೋಗಿ ಎದುರುದಾರರು ಲಂಚದ ಹಣಕ್ಕೆ ಒತ್ತಾಯಿಸುತ್ತಿದ್ದಾರೆ ಅಂತ ಹೇಳಿದಾಗ, ಲೋಕಾಯುಕ್ತ ಪೊಲೀಸ್‌ರು ಟ್ರ್ಯಾಪ್ ಪ್ರಕ್ರಿಯೆಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಪಂಚರನ್ನು ಕಳುಹಿಸಿಕೊಟ್ಟಿದ್ದು 1ನೇ ಎದುರುದಾರರು ಪಾರ್ಟಿಷನ್ ಚೆಂಬರ್‌ನಲ್ಲಿ ಕುಳಿತು ದೂರುದಾರರೊಂದಿಗೆ ಚೌಕಾಶಿ ಮಾಡಿದಾಗ ರೂ.2,000/- ಗಳ ಲಂಚದ ಹಣವನ್ನು ನಿಗದಿ ಮಾಡಿ, 2ನೇ ಎದುರುದಾರರಿಗೆ ಸದರಿ ಲಂಚದ ಹಣವನ್ನು ಪಡೆಯಲು ಸೂಚಿಸಿರುತ್ತಾರೆ. ಅದರಂತೆ 2ನೇ ಎದುರುದಾರರಿಗೆ ಇದು ಲಂಚದ ಹಣ ಅಂತ ಗೊತ್ತಿದ್ದರೂ ಸಹ 1ನೇ ಎದುರುದಾರರಿಗೆ ಸಹಕರಿಸಲು ಲಂಚದ ಹಣವನ್ನು ತೆಗೆದುಕೊಂಡಿದ್ದು ಪಂಚರ ಸಮಕ್ಷಮದಲ್ಲಿ ರೂ.2,000/- ಗಳ ಲಂಚದ ಹಣವನ್ನು ಜಪ್ತಿ ಮಾಡಿಕೊಳ್ಳಲಾಗಿದೆ.

ಡಿ) ಅದೇ ದಿವಸ ಲಂಚದ ಹಣ ರೂ.2000/- ಗಳನ್ನು ಎದುರುದಾರರಿಂದ ಪಂಚರ ಸಮಕ್ಷಮ ತನಿಖಾಧಿಕಾರಿಗಳು ಜಪ್ತಿ ಮಾಡಿಕೊಂಡು, ಪಂಚನಾಮೆ ಮಾಡಿ, ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

ಇ) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು,

ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ನಿಮ್ಮ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

ಎಫ್) ತನಿಖಾಧಿಕಾರಿಗಳು ಜಪ್ತಿ ಮಾಡಿಕೊಂಡಿರುವ ಹಣದ ಬಗ್ಗೆ ವಿವರಣೆಯನ್ನು ಕೇಳಿದಾಗ, 1ನೇ ಎದುರುದಾರರು, ದೂರುದಾರರು ಬಲವಂತದಿಂದ, ಹಣವನ್ನು ಕಡತದಲ್ಲಿಟ್ಟು ಸಲ್ಲಿಸಿದ್ದಾರೆ. ಹಣ ಕೊಡಬೇಕೆಂದು ನಾನು ಕೇಳಿಲ್ಲ, ಒತ್ತಾಯ ಮಾಡಿಲ್ಲ ಅಂತ ಹೇಳಿದ್ದು 2ನೇ ಎದುರುದಾರರು ಕಾರ್ಮಿಕ ನಿರೀಕ್ಷಕರು ನನ್ನನ್ನು ಕರೆದು ರೂ.2,000/- ಗಳನ್ನು ತೆಗೆದುಕೊಳ್ಳಿ ಮತ್ತು ಅದನ್ನು ಅವರ ಅರ್ಜಿಗೆ ಪಿನ್ ಮಾಡಿ ಬಿರೂವಿನಲ್ಲಿ ಇಡುವಂತೆ ತಿಳಿಸಿದರು. ಅದರಂತೆ ನಾನು ಪಿನ್ ಮಾಡಿ ಇಟ್ಟಿದ್ದೇನೆ ಅಂತಾ ಹೇಳಿಕೆ ಕೊಟ್ಟಿದ್ದಾರೆ.

3. ಮೇಲಿನ ಎಲ್ಲಾ ಅಪಾದನೆಗಳ ಬಗ್ಗೆ ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ ಅವರಿಂದ ತಕರಾರು/ಉತ್ತರಗಳನ್ನು ಕೇಳಲಾಗಿತ್ತು.

(ಎ) 1ನೇ ಎದುರುದಾರರು ತಮ್ಮ ತಕರಾರಿನಲ್ಲಿ/ಉತ್ತರದಲ್ಲಿ ಸರ್ಕಾರಿ ಶುಲ್ಕ ರೂ.3,000/- ಗಳು ಇದೆ. ಸುಮಾರು 10 ಜನಕ್ಕೂ ಮೇಲ್ಪಟ್ಟು ಲೈಸನ್ಸ್‌ಬೇಕೆಂದು ದೂರುದಾರರು ತನ್ನನ್ನು ಸಂಪರ್ಕಿಸಿದ್ದರಿಂದ ಸರ್ಕಾರಿ ಶುಲ್ಕವನ್ನು ಬ್ಯಾಂಕಿನಲ್ಲಿ ಪಾವತಿಸಲು ತಿಳಿಸಿರುತ್ತೇನೆ. ಆಗ ದೂರುದಾರರು ತಮಗೆ ಚಲಾನ್‌ನಲ್ಲಿ ಪಾವತಿ ಮಾಡಲು ಗೊತ್ತಾಗುವುದಿಲ್ಲ ಮತ್ತು ತನ್ನ ತಂದೆಗೆ ಹುಷಾರು ಇಲ್ಲ ಅಂತ ತಿಳಿಸಿ ತಮ್ಮನ್ನೇ ಚಲನ್ ಪಾವತಿಸುವಂತೆ ಕೋರಿದ್ದರು. ಆ ಕಾರಣದಿಂದಾಗಿ ಅಂದು ಬ್ಯಾಂಕ್‌ನ ಅವಧಿ ಮುಕ್ತಾಯಗೊಂಡಿದ್ದರಿಂದ ಅಕ್ಷರಸ್ಥ ಸಹಾಯಕರನ್ನು (1ನೇ ಎದುರುದಾರರನ್ನು) ಕರೆದು ದೂರುದಾರರು ತಮಗೆ ಕೊಟ್ಟ ರೂ.2,000/- ಗಳನ್ನು ಅವರ ಅರ್ಜಿಗೆ ಪಿನ್ ಮಾಡಿ ಇಡುವಂತೆ ತಿಳಿಸಿದ್ದೇನೆ. ಸಂಪೂರ್ಣ ಹಣ ಕೊಟ್ಟ ನಂತರ ಚಲನ್ ನೀಡುವಂತೆ ತಿಳಿಸಿರುತ್ತದೆ. ಇದು ಲಂಚದ ಹಣ ಅಲ್ಲ ಅಂತ ತಿಳಿಸಿರುತ್ತಾರೆ. ಆದರೆ 10 ರಿಂದ 19 ಜನ ಕೆಲಸಗಾರರು ಕೆಲಸ ಮಾಡಬೇಕಾದ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಮಾತ್ರ ರೂ.3,000/- ಗಳ ಶುಲ್ಕ ಇದೆ. ದೂರುದಾರರ ಸಂಸ್ಥೆಯಲ್ಲಿ 19 ಜನ ಕೆಲಸ ಮಾಡುತ್ತಿದ್ದರು ಎನ್ನುವ ಬಗ್ಗೆ ದಾಖಲೆಗಳು ಇಲ್ಲ ಅಂತ ನಮೂದಿಸಿದ್ದಾರೆ.

(ಬಿ) 2ನೇ ಎದುರುದಾರರು ತಮ್ಮ ತಕರಾರು/ಉತ್ತರದಲ್ಲಿ 1ನೇ ಎದುರುದಾರರು ಲಂಚದ ಹಣ ಕೇಳಿರುವ ವಿಷಯವೇ ತಮಗೆ ಗೊತ್ತಿರುವುದಿಲ್ಲ ಹಾಗೂ ಸಂದಾನ ಮೂಲಕ ರೂ.2,000/- ಗಳು ನಿಗದಿ ಆಗಿರುವ ವಿಷಯ ತನಗೆ ಗೊತ್ತಿಲ್ಲ ಅಂತ ತಮ್ಮ ತಕರಾರಿನಲ್ಲಿ ನಮೂದಿಸಿದ್ದಾರೆ.

4. ಆದ್ದರಿಂದ, ಎದುರುದಾರರು ಸಲ್ಲಿಸಿರುವ ಉತ್ತರ/ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ ಅವರು ತಮ್ಮ ವಿರುದ್ಧದ ನಡವಳಿಕೆಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ. ಆದುದರಿಂದ ಎದುರುದಾರರು ಸಾರ್ವಜನಿಕ/ಸರ್ಕಾರಿ ಸೇವಕರಾಗಿ ಪರಿಪೂರ್ಣ ಕರ್ತವ್ಯ ಪರಾಯಣತೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5. ಆದ್ದರಿಂದ, 1 ಮತ್ತು 2ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ 1966ರ ನಿಯಮ 3(1) (i) (ii) ಮತ್ತು (iii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬಂದಿರುವುದರಿಂದ, ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು **ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 14-ಎ ರಡಿಯಲ್ಲಿ** ಸದರಿ 1 ಮತ್ತು 2ನೇ ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(4)ರ ಪ್ರಕಾರ ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮಕೈಗೊಂಡು ಅಥವಾ ಕೈಗೊಳ್ಳಬಹುದಾದ **ಕ್ರಮದ ಬಗ್ಗೆ ಈ ವರದಿ ತಲುಪಿದ ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ನಿರ್ದೇಶಿಸಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6/11/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ